D 0C-569
T-P-2

Reg no KRMN 12 - For Influential Publicity - 16-10-76

೪೫ನೇ ವಜ್ರಮಹೋತ್ಸವ ವರ್ಷದಲ್ಲಿರುವ ಏಕೈಕ

ಸತ್ಯವಾದಿ

SATYAVADI

60th Diamond Jubilee Year
೬೦ನೇ ವಜ್ರಮಹೋತ್ಸವ ವರ್ಷ

★ Satyavadi Daily Mysore 4 ★

ಸ್ಥಾಪಕರು : ಅರಮನೆ ಏರಸ್ಟೇಡಾರ್ ಎಂ ವಿ. ಸುಬ್ಬರಾವ್

ಸಂಪಾದಕರು : ಧರ್ಮ ಚಾರನಿರತ ಎಂ ಎಸ್. ಕೃಷ್ಣರಾವ್

ಮಳೆಗಾಗಿ ಬಾಯಿಬಾಯಿ ಬಡಿದುಕೊಂಡರು

ತಿರಟ್ಟೂರು— ಹೊನ್ನವಳ್ಳಿ ಗ್ರಾಮದಲ್ಲಿ ಈ ವರ್ಷ ಬಹುಕಾಲ ಮಳೆಯಿಲ್ಲದೆ ಬೆಳೆಗಳು ಹಾಳಾಗುತ್ತಿರುವುದರಿಂದ ಇತ್ತೀಚೆಗೆ ಒಂದು ದಿನ ಅಲ್ಲಿಯ ನಿವಾಸಿಗಳು ಮಳೆ ದೇವರ ಅನುಗ್ರಹ ಪಡೆಯಲು, ಆಕಾಶದ ಕಡೆ ತಲೆ ಎತ್ತಿ, ದುಃಖಿಸುವ ಕಾಲದಲ್ಲಿ ಮಾಡುವಂತೆ ಬಾಯಿಬಾಯಿ ಬಡಿದುಕೊಂಡರು

★

ಮರಣಾನಂತರದ ಕೃಶಪ್ತಿ

ವಾಷಿಂಗ್ಟನ್— ಅಧ್ಯಕ್ಷ ಫೋರ್ಡರು ಸಹಿಹಾಕಿದ ವಿಶೇಷ ಶಾಸನ ರೀತ್ಯಾ ಅಮೇರಿಕಾದ ಪ್ರಥಮ ಅಧ್ಯಕ್ಷ ಶ್ರೀ ಜಾರ್ಜ್ ವಾಷಿಂಗ್ಟನ್ನರು ಅವರ ನಿಧನದ ನಂತರದ 177 ನೇ ವರ್ಷದಲ್ಲಿ ಈಗ ಜನರಲ್ ದರ್ಜೆಗೆ ಏರಿಸಲ್ಪಟ್ಟರು.

●

ವಿಮಾನ ಅಪಘಾತ— ಆಟವಾಡುತ್ತಿದ್ದವರನೇಕರ ಸಾವು

ಲಾ ಪಾಜ್ (ಬೊಲೀವಿಯಾ)— ಒಂದು ಸಾವಾನು ಸಾಗಿಸುವ ವಿಮಾನವು ಸಾಂತಾಕ್ರುಜ್ ನಗರಕ್ಕೆ ಬಿದ್ದು, ಒಂದು ಕಾರ್ಖಾನೆ ಮತ್ತು ಸ್ಕೂಲು ಆವರಣದ ಮೇಲೆ ಹಾಯ್ದು, ನಾನಾರು ಜನರು ಕೊಲ್ಲಲ್ಪಟ್ಟರೆಂದು ವರದಿಯಾಗಿದೆ — ವಿಮಾನ ಬಿಟ್ಟು ಸಾಕಷ್ಟೊಂಡಿತು, ಅದರಲ್ಲಿದ್ದ ಮೂರು ಚಾಲಕರು ಬೆಂದುಹೋದರು — ಕಾಲ್ಚೆಂಡಾಟ ಆಡುತ್ತಿದ್ದ ಅನೇಕ ಯುವಕರು ಸತ್ತರು.

○

ಸೈಕಲ್ ರ್ಯಾಲಿ

ಮುದಂತಕ್ಕು— ಕಾಲೇಜುಗಳಿಗೆ ಬದಲ್ಲು ಪದವೀಧರ 20 ಕಿಂಡಗಳ 100 ಯುವಕ ಸೈಕಲ್ ಉತ್ಸಾಹಿಗಳು ಶುಕ್ರವಾರ ಬೆಳಿಗ್ಗೆ ಮದರಾಸು-ಬೆಂಗಳೂರಿನ 336 ಕೆಎಂ ಸಾಮೂಹಿಕ ಸೈಕಲ್ ರ್ಯಾಲಿಯಲ್ಲಿ ವಿಶ್ವವಿದ್ಯಾಸಿಲಯದ ಆವರಣದಿಂದ ಹೊರಟರು.

★

ಗುಪ್ತರ ಕಾಲದ ಚಿನ್ನದ ನಾಣ್ಯ

ಹುಗ್ಲಿ ಜಿಲ್ಲೆಯ ಒಂದು ಗ್ರಾಮದಲ್ಲಿ ಒಂದು ಮಡಿಕೆಯಲ್ಲಿ ಹೂತಿಟ್ಟಿದ್ದ ಗುಪ್ತರ ಕಾಲದ ಹನ್ನೊಂದು ಚಿನ್ನದ ನಾಣ್ಯಗಳು ಸಿಕ್ಕಿವೆ.

○

ಇದೊಂದು ಹೊಸ ರೋಗ

ಮಕ್ಕಳ ಆಸ್ಪ್ರಿಕಾದಲ್ಲಿ ಒಂದು ಹೊಸ ರೋಗದಲ್ಲಿ 300 ಮಂದಿ ಸತ್ತಿರುವರೆಂದೂ, ಈ ರೋಗವನ್ನು ಗುಣಪಡಿಸುವ ಔಷಧೋಪಚಾರ ಇನ್ನೂ ಗೊತ್ತಾಗಿಲ್ಲವೆಂದೂ ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ

★

ದಿವ್ಯವಾಣಿ

ಜೀವಪಥ ನೈತ್ಯ ಮಂಟಪವಲ್ಲ, ಕುಸ್ತಿಯ ಕಣ — ಮಾರ್ಕಸ್ ಅರೇಲಿಯಸ್

ಯೂರೋಪಿನ ಪೇಟೆಗಳಲ್ಲಿ ಭಾರತದ ಕಲ್ಲಿದ್ದಲಿಗೆ ಶಂಬಾ ಬೇಡಿಕೆ ಇದೆ.

ಕರ್ನಾಟಕ ಪಿಡಬ್ಲ್ಯೂಡಿ

ತಿದುಪಡಿ 3

ಧ

ವಿಷಯ — ಟೆಂಡರ್ ಪ್ರಕಟಣೆ ನಂ 18/76-77 ತಾ॥ 2-4-76 ರಬನಿ ಬಲದಡದ ಕಾಲುವೆಯ 1, 2 ಮತ್ತು 3 ನೇ ಮೈಲುಗಳಲ್ಲಿ ಕಾಲುವೆ ಬೆಡ್ ಮತ್ತು ಸೈಡ್ಸ್‌ಗಳಿಗೆ ಲೈನಿಂಗ್ ಒದಗಿಸುವುದಕ್ಕಾಗಿ ಕೆಲಸ.

ಸಂಬಂಧ — ಈ ಕಚೇರಿ ಪತ್ರದ ನಂ. ಕೆಒಡಿ/ ಡಿಬಿ 2/ ಕೆಆರ್‌ಬಿಸಿ/ ಟಿಎನ್‌ಡಿ 5986-6000 ತಾ॥ 28-7-76

2 ಈ ಕಚೇರಿ ಪತ್ರದ ನಂ ಕೆಒಡಿ/ ಡಿಬಿ/ ಟಿಎನ್‌ಡಿ/ 75-76/ 6155 ತಾ॥ 30-7-76

3 ಕರ್ನಾಟಕ ಗೆಜೆಟ್ ತಾ॥ 12-8-76 (ಪು 698) ನೋಟ್ಸಂಡ ಪ್ರಕಟಣೆ ಮಾಡಿರುವುದು

4 ಈ ಕಚೇರಿ ಪತ್ರದ ನಂ ಕೆಒಡಿ/ ಡಿಬಿ 2/ ಟಿಎನ್ 76-77 7743-55 ತಾ॥ 25-8-1976

5 ಕರ್ನಾಟಕ ಗೆಜೆಟ್ ತಾ॥ 2-9-76 (ಪು 790) ತಿದ್ದುಪಡಿ 1 ಪ್ರಕಟಣೆ ಮಾಡಿರುವುದು

6 ಈ ಕಚೇರಿ ಪತ್ರದ ನಂ ಕೆಒಡಿ/ ಡಿಬಿ 2/ ಟಿಎನ್‌ಡಿ/ 76-77 8562-75 ತಾ॥ 14-9-1976

7 ಕರ್ನಾಟಕ ಗೆಜೆಟ್ ತಾ॥ 23-9-1976 (ಪು 835) ತಿದ್ದುಪಡಿ 2 ಪ್ರಕಟಣೆ ಮಾಡಿರುವುದು

ರಬನಿ ಬಲದಡದ ಕಾಲುವೆಯ 1, 2 ಮತ್ತು 3 ಮೈಲಿಗಳಲ್ಲಿ ಕಾಲುವೆಯ ಬೆಡ್ ಸೈಡ್‌ಗಳಿಗೆ ಲೈನಿಂಗ್ ಒದಗಿಸುವ ಕೆಲಸಕ್ಕಾಗಿ ಟೆಂಡರ್‌ಗಳಿಗೆ ಕರೆಕೊಟ್ಟಿರುವ ತಾ॥ 2-4-76 ರ ನಂ. 18 / 76-77 ರ ಟೆಂಡರ್ ಪ್ರಕಟಣೆ ಇದರೊಡನೆ ರದ್ದು ಮಾಡಲ್ಪಟ್ಟಿದೆ

ಸಹಿ/- ಎಕ್ಸಿಕ್ಯೂಟೀವ್ ಇಂಜಿನಿಯರ್, ರಬನಿ ಕಾಲುವೆ ವಿಭಾಗ, ಮೈಸೂರು-2

ಸುಗ್ರೀವಾಜ್ಞೆ ಘೋಷಣೆ

ಚಂಡೀಘರ್ — ಹರಿಯಾಣದಲ್ಲಿಯ ಸಾವಿರಗಟ್ಟಲೆ ಪಂಜಾಗಳು ಹಾಗೂ ಸಂಪಂಜಾಗಳಲ್ಲಿ ಜ್ಞಹರ್‌ವಾದ ದಂಪತಿಗಳು 3 ತಿಂಗಳೊಳಗೆ ಸಂತತಿಹರಣ ಚಿಕಿತ್ಸೆ ಪಡೆಯದಿದ್ದರೆ ತಮ್ಮ ಸ್ಥಾನಗಳನ್ನು ಕಳೆದುಕೊಳ್ಳುವರೆಂದು ಸುಗ್ರೀವಾಜ್ಞೆ ಹೊರಡಿಸಲಾಗಿದೆ

○

ಅಧ್ಯಕ್ಷರಿಂದ ಸಮರ್ಥನೆ

ವಾಷಿಂಗ್ಟನ್ — ಇಸ್ರೇಲಿಗೆ ಹೊಸ ಆಯುಧಗಳನ್ನು ಕೊಡುವ ತಮ್ಮ ನಿರ್ಣಯವನ್ನು ಶುರಿತು ಅಧ್ಯಕ್ಷ ಫೋರ್ಡ್ ಸಮರ್ಥಿಸಿರುವರು.

★

ಮಹಿಳೆಯರ ನೇಮಕಕ್ಕೆ ಕರೆ

ವಿಶ್ವಸಂಸ್ಥೆ — ವಿಶ್ವಸಂಸ್ಥೆ ಕಚೇರಿಯಲ್ಲಿ ಅದರಲ್ಲೂ ಹಿರಿಯ ಸ್ಥಾನಗಳಿಗೆ ಹೆಚ್ಚು ಮಹಿಳೆಯರನ್ನು ಸೇರಿಸಲು ಭಾರತ ಮತ್ತಾ ಆಸ್ಟ್ರೇಲಿಯ ಕರೆನೀಡಿದೆ.

●

ನೋಬಲ್ ಸಮಿತಿ ನಿರ್ಧಾರ

ಓಸ್ಲೋ — 1976 ಕ್ಕೆ ಶಾಂತಿ ಪುರಿಸ್ಕಾರ ಕೊಡದಿರಲು ನಾರ್ವೆ ನೋಬಲ್ ಬಹುಮಾನ ಸಮಿತಿ ನಿರ್ಧರಿಸಿದೆ

●

ಅಗ್ನಿ ಅಕಸ್ಮಿಕ

ರಾಣಾ — ಹನುಮಾಪುರದ ಒಬ್ಬನ ಮನೆಯಲ್ಲಿ ಆದ ಅಗ್ನಿ ಅಕಸ್ಮಿಕದಲ್ಲಿ 3 ಎತ್ತುಗಳು ಮತ್ತು ಒಂದು ಎಮ್ಮೆ ಸಜೀವ ಸುಟ್ಟುಹೋದವು.

★

ಕೆಂಪು ಚೀನಾದಲ್ಲಿ ಪ್ರದರ್ಶನಗಳು ಬಲವಾಗಿವೆ.

ಮುನ್ನುಡಿ

ಭಾರತದ ಪ್ರಖ್ಯಾತ ದೇವಸ್ಥಾನಗಳಲ್ಲಿ ಒಂದು, ಗುರುವಾಯೂರಿನ ಶ್ರೀ ಕೃಷ್ಣ ದೇವಾಲಯ : ಗೋಪಾಲನ ಗುಡಿ ಅಂದಮೇಲೆ ಗೋವುಗಳು ಇರಲೇಬೇಕು; ಹಾಗೆಯೇ ಗೋಪಾಲನ ಅವತಾರ ಭೂಮಿಯಲ್ಲಿ ಅಕಳುಗಳು ಆನಂದದಿಂದಿರಲೇಬೇಕು ಅದರೆ ? ಅದುನೇ ಪ್ರಶ್ನಾರ್ಥ ಚಿಹ್ನೆ : ದೇವಸ್ಥಾನಗಳಿಗೆ ಹೆಚ್ಚಾಗಿ ದನದ ಕರುಗಳನ್ನು ಹರಕೆಯ ರೂಪದಲ್ಲಿ ಕೊಡುವುದುಂಟು ; ಅದನ್ನು ದೇವಸ್ಥಾನದ ಅಧಿಕಾರಿಗಳು ಏಲಂ ರೂಪದಲ್ಲಿ ಮಾರುವುದೂ ಇದೆ ; ಕೆಲವೆಡೆಗಳಲ್ಲಿ ಗೋಶಾಲೆ ಇರುವಲ್ಲಿ ಅವನ್ನು ದೇವಸ್ಥಾನದ ಗೋಮಂದಿರದಲ್ಲಿ ಸೇರಿಸಿಕೊಳ್ಳುತ್ತಾರೆ ; ಅಂತೂ ಆ ಕರುಗಳಿಗೆ ಕರುಣಾಜನಕ ಸ್ಥಿತಿ ಇರುವುದಲ್ಲ ; ಇದು ಸಾಧಾರಣ ಜನರ ನಂಬಿಕೆ

ಗುರುವಾಯೂರಪ್ಪ ದೇವಸ್ಥಾನದಲ್ಲಿ ಕೆಲವು ಅವಘಡಗಳು ನಡೆಯುತ್ತಾ ಬಂದ ಕಾರಣ, ಅದರ ಕಾರಣವೇನೆಂದು ಕಂಡುಹಿಡಿಯಲು ದೇವಪ್ರಶ್ನೆಗೆ ಅವಕಾಶ ಮಾಡಿಕೊಡಲಾಯಿತು ; ದೇವಪ್ರಶ್ನೆಯಲ್ಲಿ ದೇವಸ್ಥಾನದಲ್ಲಿ ನಡೆಯುತ್ತಿರುವ ಅನೇಕಾನೇಕ ಅಸುರೀ ಅಕೃತ್ಯಗಳ ಕುರಿತು ತಿಳಿಸಲಾಗಿದೆ ; ಅದರಲ್ಲಿ ಅಕಳುಗಳ ಸುರಿತೂ ಇದೆ ; ದೇವಸ್ಥಾನಕ್ಕೆ ಬಿಟ್ಟ ದನಗಳನ್ನು ಜೆನ್ನಾಗಿ ನೋಡಿಕೊಳ್ಳಲಾಗುತ್ತಿಲ್ಲವೆಂದೂ, ಅದನ್ನು ತಿಳಿಯಪಡಿಸಲು ದುರ್ಘಟನೆಗಳು ನಡೆಯುತ್ತಿವೆಯೆಂದೂ ಸ್ಪಷ್ಟಪಡಿಸಲಾಗಿದೆ ; ದನಗಳಿಗೆ ಧಕ್ಕೆ ಬಂದಲ್ಲಿ ದೇವಸ್ಥಾನದ ವೈಶಿಷ್ಟ್ಯಕ್ಕೆ ಭಂಗಬರುವುದು ಸ್ವಾಭಾವಿಕ ; ಹಸುಗಳು ಹಾಯಾಗಿದ್ದರೇನೇ ಮಂದಿರವು ಮನಶ್ಶಾಂತಿಯನ್ನೀಯಬಲ್ಲುದು : ಇದು ದೇವಪ್ರಶ್ನೆಯ ನಂತರ ಬೆಳಕಿಗೆ ಬಂದಿದೆ.

ಈ ವಿಷಯ ಗುರುವಾಯೂರಿನ ದೇವಸ್ಥಾನಕ್ಕೆ ಮಾತ್ರ ಸೀಮಿತವಲ್ಲ ; ಆ ದೇವಸ್ಥಾನ ಇರುವ ಕೇರಳಕ್ಕೂ ಅದೊಂದು ಕೆಂಪುದೀಪ : ಅಷ್ಟೇ ಅಲ್ಲ, ಅಖಿಲ ಭಾರತಕ್ಕೆ ಆದೊಂದು ಮುನ್ನುಡಿ, ಮುನ್ಸೆಚ್ಚರಿಕೆಯೂ ಇದೆ. ಇಂದು ಗುರುವಾಯೂರಿನಲ್ಲಿ ಮಾತ್ರವಲ್ಲ. ಕೇರಳದಲ್ಲಿ ಮಾತ್ರವಲ್ಲ, ಭಾರತದಲ್ಲಿ ಗೋಜೀವನ ಅತೀವ ಕರುಣಾಜನಕವಿದೆ ; ಇದನ್ನು ನಿರ್ಲಕ್ಷಿಸಿದ್ದರೆ ಭವಿತವ್ಯ ಇಲ್ಲವೆಂಬುದು ದೇವಪ್ರಶ್ನೆಯ ಸಮಯ ಜ್ಞಾನಕ್ಕೆ ಬಂದ ವಿಷಯವಾಗಿದೆ.

ಆದ್ದರಿಂದ ಅಕಳಿಗೆ ಯೋಗ್ಯ ಸ್ಥಾನ ಸಿಗುವಂತೆ ಪ್ರಯತ್ನ ನಡೆಸಲ್ಪಡಬೇಕು.

— ಶಿವಶಂಕರ

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ



Protect the Cow

ವುಡ್‌ಲಾಂಡ್ 15 10 76 ರಿಂದ

ಅವೋಘ ಆರಂಭ

ಮಾ

ಹಿಂದಿ

ಕಲರ್

ಧರ್ಮೇಂದ್ರ ಹೇಮಮಾಲಿನಿ ಅಭಿನಯ

ದಿನ 4 ಪ್ರದರ್ಶನಗಳು

ಅಪೆರಾ 15 10 76ರಿಂದ

ಕುಮಾರ ವಿಜಯಂ

ಕಮಲಾ ಹಾಸನ್ ಜಯಚಿತ್ರ ಅಭಿನಯ

ತಮಿಳು

ಪ್ರತಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally to
the National Defence Fund

Edited Printed and Published by Dharmaprachcharanirata M S. Krishna Rao (Proprietor) at the Satyavadi Press, Chamarajapuram Mysore 4